ನೂಪುರ ಭ್ರಮರಿ

...ನರ್ತನ ಜಗತ್ತಿಗೊಂದು ಪರಿಭ್ರಮಣ

**Noopurabhramari- Centre for Indian Knowledge system, accredited to IKS Division, a wing of Ministry of Education, Govt of Bharata**

**ಕನ್ನಡವನ್ನು ಅರ್ಥಮಾಡಿಕೊಳ್ಳಬಲ್ಲ ಮಕ್ಕಳಿಗಾಗಿ ನೂಪುರ ಭ್ರಮರಿ ಸಂಸ್ಥೆಯಿಂದ ಆಯೋಜಿತವಾದ ಭಾವನಾತ್ಮಕ ಸಂವರ್ಧನೆ ಆಶಯದ ತರಗತಿ/ಕಾರ್ಯಾಗಾರ ಕಾರ್ಯಕ್ರಮ**

# ಭಾವಾನುಭಾವ– 2025

**ನೂಪುರ ಭ್ರಮರಿ (ರಿ.) – ಭಾರತದ ಪ್ರದರ್ಶನಕಲೆಗಳು ಹಾಗೂ ಸಂಬಂಧಿತ ಕಲೆಗಳ ಅಧ್ಯಯನ, ಪ್ರಕಾಶನ, ಉನ್ನತ ಮಟ್ಟದ ಸಂಶೋಧನೆ, ದಾಖಲೆ ಸಂಗ್ರಹ ಹಾಗೂ ವಿದ್ಯಾರ್ಥಿವೇತನ ಕಾರ್ಯಗಳಿಗೆ ಸಮರ್ಪಿತವಾದ ಭಾರತದ ಪ್ರತಿಷ್ಠಿತ ಸಂಸ್ಥೆಗಳಲ್ಲೊಂದು. ಭಾರತದ ಶಿಕ್ಷಣ ಸಚಿವಾಲಯದ ಭಾರತೀಯ ಜ್ಞಾನಪರಂಪರೆ ವಿಭಾಗದಿಂದ (IKS Division) ಭಾರತೀಯ ಜ್ಞಾನಪರಂಪರೆ ಅಧ್ಯಯನ ಕೇಂದ್ರವಾಗಿ (Centre for Indian Knowledge Systems) ಮಾನ್ಯತೆ ಪಡೆದಿದೆ. ಈ ಕೇಂದ್ರವು IKS ವಿಭಾಗದಡಿ ಅನೇಕ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಗಮನಾರ್ಹ ಫಲಿತಾಂಶಗಳನ್ನು ಸಾಧಿಸಿದೆ. ಇಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿದ್ದಾರೆ. ನೂಪುರಭ್ರಮರಿಯು ತನ್ನ ಆನ್ಲೈನ್ ಪತ್ರಿಕೆ ಮತ್ತು ಸಂಶೋಧನ ಪತ್ರಿಕೆ ಪ್ರಕಾಶನಗಳ ಜೊತೆಗೆ, ಈಗಾಗಲೇ 10+6 ಕೃತಿಗಳನ್ನು ಪ್ರಕಟಿಸಿದ್ದು, 3 ಸಮ್ಮೇಳನಗಳು, 8 ವಿಚಾರಸಂಕಿರಣಗಳು, 11 ಪ್ರಮಾಣಪತ್ರಾಧಾರಿತ ಪಠ್ಯಕ್ರಮಗಳು, 12 ಕಾರ್ಯಾಗಾರಗಳು, 4 ಇಂಟರ್ನ್‌ಶಿಪ್‌ಗಳು ಹಾಗೂ ಫೆಲೋಶಿಪ್ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಿದೆ. ಜೊತೆಗೆ ಆಕಾಶವಾಣಿಯಲ್ಲಿ 40 ವಿಶೇಷ ಕಾರ್ಯಕ್ರಮ ಪ್ರಸಾರಗಳು, 20ಕ್ಕೂ ಹೆಚ್ಚು ಸಂಶೋಧನಾಧರಿತ ನೃತ್ಯ– ಯಕ್ಷಗಾನ ಪ್ರದರ್ಶನಗಳು, ಅನೇಕ ಶೈಕ್ಷಣಿಕ ಲೇಖನಗಳು, 150ಕ್ಕೂ ಹೆಚ್ಚು ಆಡಿಯೋ–ವಿಜುವಲ್ ಸರಣಿಗಳು ಹಾಗೂ ಡಾಕ್ಯುಮೆಂಟರಿಗಳ ಸಂಗ್ರಹವನ್ನು ಯಶಸ್ವಿಯಾಗಿ ಕೈಗೊಂಡಿದೆ. ಈ ಸಂಸ್ಥೆಯು 2025–26ರಲ್ಲಿ ವಿಂಶತಿ ಉತ್ಸವ (20ನೇ ವಾರ್ಷಿಕೋತ್ಸವ) ಆಚರಿಸಿಕೊಳ್ಳುತ್ತಿದ್ದು ಈ ಸಂಬಂಧ ಅನೇಕ ವಿಶಿಷ್ಟ ಶೈಕ್ಷಣಿಕ ಕಾರ್ಯಾಗಾರ, ತರಬೇತಿ ಹಾಗೂ ಪ್ರದರ್ಶನ ಕಾರ್ಯಕ್ರಮಗಳನ್ನು ಆಯೋಜಿಸಿದೆ.**

## ಕಾರ್ಯಾಗಾರ ತರಗತಿಯ ಆಶಯ

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಈ ಮಕ್ಕಳ ಭಾವನಾತ್ಮಕ ಸಾಮರ್ಥ್ಯ (EQ), ಹಾಗೂ ಬೌದ್ಧಿಕ ಸಾಮರ್ಥ್ಯವೇ (IQ) ಸಮಾಜ ಹಾಗೂ ಒಟ್ಟು ಪರಿಸರದ ಆರೋಗ್ಯಕರ ಬಾಳ್ವೆಗೆ ಮುನ್ನುಡಿಯನ್ನು ಹಾಕುತ್ತದೆ. ಆದರೆ ಪ್ರಸಕ್ತ ದಿನಗಳಲ್ಲಿ ಮಕ್ಕಳ ಬೌದ್ಧಿಕ ಸಾಮರ್ಥ್ಯವನ್ನೇ ಹೆಚ್ಚಾಗಿ ವೃದ್ಧಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ಇವೆಯೇ ಹೊರತು; ಭಾವನಾತ್ಮಕವಾಗಿ ಅವರನ್ನು ಸಬಲಗೊಳಿಸುವ ದಾರಿಗಳು ಬಹಳ ಕ್ಷೀಣವಾಗುತ್ತಿವೆ. ಅದೂ ಆಧುನಿಕವಾದ ಮಾಧ್ಯಮಗಳ ಭರಾಟೆ ಹಾಗೂ ಮೊಬೈಲ್ ವ್ಯಸನವೇ ಮೊದಲಾದವುಗಳಲ್ಲಿ ಕಳೆದುಹೋಗುತ್ತಿರುವ ಮಕ್ಕಳಿಗೆ ಸುತ್ತಮುತ್ತಲಿನ ವ್ಯಕ್ತಿಗಳ, ಪರಿಸರದ ಹಾಗೂ ತಮ್ಮ ಬಗೆಗಿನ ಭಾವನೆಗಳನ್ನು ಸರಿಯಾಗಿ ಅರಿಯುವಂತೆ ಮಾಡಿ ಸಂವೇದನಾಶೀಲವಾಗಿಸುವ ಜವಾಬ್ದಾರಿ ಇದೆ. ಭಾವಸಂವೇದನಾಶೀಲ ವ್ಯಕ್ತಿಯೇ ಭಾರತವನ್ನು ಕಟ್ಟಲು ಸಾಧ್ಯ. ಈ ಹಿನ್ನೆಲೆಯಲ್ಲಿ ನೂಪುರಭ್ರಮರಿ ಸಂಸ್ಥೆಯು ಕನ್ನಡವನ್ನು ಅರ್ಥಮಾಡಿಕೊಳ್ಳಬಲ್ಲ ವಿದ್ಯಾರ್ಥಿಗಳಿಗೆಂದೇ ***ಭಾವಾನುಭಾವ– 2025*** ಎಂಬ ಶೀರ್ಷಿಕೆಯಲ್ಲಿ ಭಾವನಾತ್ಮಕ ಸಂವರ್ಧನೆ ಆಶಯದ ಕಾರ್ಯಾಗಾರ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿದೆ.

## ಭಾವಾನುಭಾವ ಎಂದರೇನು? ಉಪಯೋಗ ಹೇಗೆ?



ಭಾವ+ಅನುಭಾವ. ಅಂದರೆ Emotion and Expression. ಮಾನವನಾಗಿ ಹುಟ್ಟಿದ ಮೇಲೆ ಇರುವ ಸಹಜ ಭಾವ ಯಾವುದು? ಬೆಳೆಸಲ್ಪಡುವ ಭಾವಗಳು ಯಾವುವು? ಅವುಗಳ ಅಭಿವ್ಯಕ್ತಿ ಹೇಗೆ? ಯಾವ ಭಾವ ಹಾಗೂ ಅಭಿವ್ಯಕ್ತಿಗೆ ಏನು ಹೆಸರು? ಹೇಗೆ ಕಂಡುಹಿಡಿಯುವುದು? ಯಾವ ಭಾವಕ್ಕೆ ಯಾವ ಅನುಭಾವ ಯುಕ್ತ? ಅವುಗಳ ನಟನಾಕೌಶಲ್ಯ ಹೇಗೆ? ವೃದ್ಧಿಸಿಕೊಳ್ಳುವ ರೀತಿ ಹೇಗೆ? ರಸಗಳ ವ್ಯವಸ್ಥೆ ಹೇಗಿದೆ – ಹೀಗೆ ಇನ್ನೂ ಹಲವು ವಿಚಾರಗಳನ್ನು ಮುಕ್ತ ಸಂವಾದದ ಕ್ರಿಯಾತ್ಮಕ ತರಗತಿಗಳ ಮೂಲಕ ಕಲಿಸಲಾಗುತ್ತದೆ. ನಾಟ್ಯಶಾಸ್ತ್ರದ ನವರಸಗಳನ್ನು ಆಧರಿಸಿದ ಕಾರ್ಯಕ್ರಮ ಇದಾಗಿದೆ. ಜೀವನದಲ್ಲಿ ಕಾಣಬರುವ ಭಾವ–ರಸಗಳನ್ನು ಮಕ್ಕಳಿಗೆ ಪರಿಣಾಮಕಾರಿಯಾಗಿ ಪರಿಚಯಿಸುವ ಆಶಯವನ್ನು ಹೊಂದಿದೆ. ಜೊತೆಗೆ ಮಕ್ಕಳು ಸುಲಭವಾಗಿ ನೆನಪಿಡುವಂತೆ ಪದ್ಯಸಾಹಿತ್ಯವನ್ನೂ ಹೇಳಿಕೊಡಲಾಗುತ್ತದೆ. ಆಯೋಜಕರಿಂದ (ಶಾಲೆ/ ನೃತ್ಯಶಾಲೆ/ ರಂಗಭೂಮಿ ಸಂಸ್ಥೆ ಇತ್ಯಾದಿ) ಬೇಡಿಕೆಯಿದ್ದಲ್ಲಿ ಸಮಯದ ವ್ಯಾಪ್ತಿಯನ್ನು ಗಮನಿಸಿ ಇದೇ ವಿಷಯದ ಮುಂದುವರಿಕೆಯೆಂಬಂತೆ ಅಭಿನಯದ ಕಲಿಕೆಯನ್ನೂ ಹಮ್ಮಿಕೊಳ್ಳಲಾಗುತ್ತದೆ. ಇದರಿಂದ ಜೀವನ ಹಾಗೂ ರಂಗಗಳೆರಡರಲ್ಲೂ ಸಾಧಿಸಬೇಕಾದ ಭಾವನಾತ್ಮಕ ಸಂವಹನದ ವ್ಯಾಪ್ತಿಯ ಅರಿವಾಗುತ್ತದೆ. ಧನಾತ್ಮಕ ಚಿಂತನೆಗಳು ಹುಟ್ಟುತ್ತವೆ. ಋಣಾತ್ಮಕ ಆಲೋಚನೆಗಳ ಬಗ್ಗೆ ವಿವೇಕ ಹೊಮ್ಮುತ್ತದೆ. ಗುಣಾತ್ಮಕವಾದ ಭಾವವೃದ್ಧಿ ಸಾಧ್ಯವಾಗುತ್ತದೆ. ಹಾಗೂ ಮಕ್ಕಳಲ್ಲಿರುವ ಕಲಾಸಕ್ತಿಯು ಪೋಷಣೆಗೊಂಡು ಗುಣಮಟ್ಟದ ಕಲಾವಿದರಾಗಿ ಬೆಳೆದು ಪರೀಕ್ಷೆ– ರಂಗಪ್ರದರ್ಶನಗಳನ್ನು ಸಮರ್ಥವಾಗಿ ನಿರ್ವಹಿಸಲು ಇಲ್ಲವೇ ಉತ್ತಮ ಪ್ರೇಕ್ಷಕರೆನಿಸಿಕೊಳ್ಳಲೂ ಅವಕಾಶವಾಗುತ್ತದೆ.

## ಕನ್ನಡವೇ ಏಕೆ?

ಭಾಷೆಯೇ ಭಾವದ ತಂತು. ನಮ್ಮ ನಾಡು–ನೆಲ–ಜಲ–ಸಂಸ್ಕೃತಿಯ ಚೈತನ್ಯವನ್ನು ಮೂಡಿಸುವುದೇ ಭಾಷೆ. ಭಾಷೆ ಬಲಗೊಂಡರೆ ಜಾಗೃತಿ ತನ್ನಿಂತಾನೇ ಪ್ರವಹಿಸುತ್ತದೆ. ಭಾರತೀಯ ಭಾಷೆಗಳ ಬೆಳವಣಿಗೆಯು **IKS**ನ ಗುರಿಯಾಗಿದೆ ಕೂಡಾ. ಮಾತೃಭಾಷೆಯ ಮಹತ್ತ್ವವನ್ನು ಲಯಬದ್ಧವಾದ ಪದ್ಯದ ಮೂಲಕವಾಗಿ ಸ್ಮರಣಾರ್ಹವಾಗಿಸಿ ಭಾವಸಂಬಂಧವನ್ನು ಉದ್ದೀಪಿಸುವುದು ಹಾಗೂ ಭಾಷೆಯ ಪುನಶ್ಚೇತನಕ್ಕೆ ಸಹಕರಿಸುವುದು ಕೂಡಾ ಈ ಕಾರ್ಯಾಗಾರದ ಉದ್ದೇಶವಾಗಿದೆ.

## ಮಕ್ಕಳಿಗೆ ಏಕೆ?

ಎಳವೆಯಲ್ಲಿ ಕಲಿತ ವಿಷಯ ಜೀವನದುದ್ದಕ್ಕೂ ದಾರಿದೀಪವಾಗುವುದು. ಬೆಳೆಯುವ ಸಿರಿ ಮೊಳಕೆಯಲ್ಲೇ ಕಾಣಿಸಬೇಕೆಂದರೆ ಅದಕ್ಕೆ ಯುಕ್ತವಾದ ಪೋಷಣೆ ಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ? ಹಾಗೆಂದೇ ಶಿಕ್ಷಣದಲ್ಲಿ ಇದನ್ನು ಅಳವಡಿಸಿಕೊಂಡರೆ ಪರಿಣಾಮ ಹೆಚ್ಚೆಂದು ಅಂದಾಜಿಸಿ ರೂಪಿಸಲಾಗಿದೆ. ಅದರಲ್ಲೂ ಈ ತರಗತಿಗಳು 4, 5, 6 ಮತ್ತು 7ನೇ ತರಗತಿಯ ಮಕ್ಕಳನ್ನು ಸುಲಭವಾಗಿ ತಲುಪುವಂತಿವೆ.



## ಎಷ್ಟು ಅವಧಿ?

ಈ ಕಾರ್ಯಾಗಾರ/ತರಗತಿಗಳು ಸುಮಾರು 4ರಿಂದ 8ಗಂಟೆಗಳ ಅವಧಿಯವು. ಶಾಲಾವಧಿಗಳಲ್ಲಿ ವಾರಕ್ಕೆ ಒಂದು ಘಂಟೆಯಂತೆ ಒಂದು ತಿಂಗಳು ಇಲ್ಲವೇ ಎರಡು ತಿಂಗಳನ್ನು ಮೀಸಲಿಡುವುದರಿಂದ ಈ ಕಾರ್ಯಾಗಾರ ಸಾಧ್ಯ. ಭಾವಪರಿಚಯಕ್ಕೆ ನಾಲ್ಕು ತರಗತಿ. ಅವನ್ನು ನಟನಾತ್ಮಕವಾಗಿ ಸಿದ್ಧಿಸಿಕೊಳ್ಳಲು ನಾಲ್ಕು ತರಗತಿಗಳು ಅವಶ್ಯ. ಇಲ್ಲವೇ ಕೇವಲ ನಾಲ್ಕು ತರಗತಿಯಲ್ಲಿ ಪರಿಚಯವನ್ನಷ್ಟೇ ಮಾಡಿಕೊಡಬಹುದು. ಪದ್ಯಸಾಹಿತ್ಯವನ್ನು ಅರ್ಥ ಮಾಡಿಸಿದ ಬಳಿಕ ಅದನ್ನು ಕಲಿತುಕೊಂಡಲ್ಲಿ ಮಕ್ಕಳಲ್ಲಿ ಹೆಚ್ಚಿನ ಸಾಮರ್ಥ್ಯವೃದ್ಧಿಗೆ ಅವಕಾಶವಾಗುವುದು. ಈ ಕಾರ್ಯಗಾರದ ಫಲಶ್ರುತಿಯಾಗಿ ಅಭಿವ್ಯಕ್ತಿ ಕಾರ್ಯಕ್ರಮವನ್ನೂ ವಾರ್ಷಿಕೋತ್ಸವಗಳಲ್ಲಿ ನಡೆಸಬಹುದಾಗಿದೆ.

## ಯಾರು ಸಂಪರ್ಕಿಸಬಹುದು?

ಕರ್ನಾಟಕದ ಯಾವುದೇ ಆಸಕ್ತ ಸಂಸ್ಥೆಗಳು ಸಂಪರ್ಕಿಸಬಹುದಾಗಿದೆ. ಪ್ರಯಾಣ/ವಸತಿ–ಊಟದ ವ್ಯವಸ್ಥೆ/ಭತ್ಯೆಯನ್ನು ಭರಿಸತಕ್ಕದ್ದು. ಆಯೋಜಕರ ಬೇಡಿಕೆಗೆ ಅನುಗುಣವಾಗಿ ಸಮಯಾವಕಾಶವನ್ನು ಗಮನಿಸಿ ಕಾರ್ಯಾಗಾರದ ಅವಧಿಯನ್ನು ಹಮ್ಮಿಕೊಳ್ಳಲಾಗುವುದು.

**ಸಂಪರ್ಕ ಸಂಖ್ಯೆ : +91 9448492859 / +91 9945314965 /**

**editor@noopurabhramari.com / www.noopurabhramari.com**